ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಸಿ.ಜೆ.ಎಂ. ನ್ಯಾಯಾಲಯ,
ಚಿಕ್ಕಮಗಳೂರು.
ಇ.ಸಿ.ಎ ನಂ.10/2024

| | | |
|---|---|---|
| ಸಾಕ್ಷಿದಾರರ ಹೆಸರು | ಗೌರಮ್ಮ | ಆರ್.ಡಬ್ಲ್ಯೂ.1 |
| ಗಂಡನ ಹೆಸರು | ಚಂದ್ರೇಗೌಡ | |
| ವಯಸ್ಸು | 73 ವರ್ಷ | |
| ವೃತ್ತಿ | ವ್ಯವಸಾಯ | |
| ವಾಸ | ಹೆಡದಾಳು | |

ದಿನಾಂಕಃ 20-02-2026 ರಂದು ಪ್ರಮಾಣ ವಚನ ಭೋದಿಸಲಾಯಿತು.

ಮುಖ್ಯ ವಿಚಾರಣೆಃ 2 ನೇ ಎದುರುದಾರ ಪರ ವಕೀಲರಿಂದಃ-

ನಾನು ಈ ದಿನ ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸುತ್ತಿದ್ದು ಅದರಲ್ಲಿ ಬರೆದಿರುವ ಎಲ್ಲಾ ವಿಷಯಗಳು ಸತ್ಯವಾಗಿರುತ್ತದೆ. ಅದರಲ್ಲಿರುವ ಸಹಿ ನನ್ನದು.

ಒಂದು ಪಹಣಿ ಪತ್ರಿಕೆಯನ್ನು ಹಾಜರುಪಡಿಸಿದ್ದು ಆರ್-1 ಎಂದು ಗುರುತಿಸಲಾಯಿತು.

ಆದ್ದರಿಂದ ಅರ್ಜಿದಾರರ ಅರ್ಜಿಯನ್ನು ವಜಾ ಮಾಡಬೇಕಾಗಿ ಪ್ರಾರ್ಥಿಸುತ್ತೇನೆ.

ಪಾಟೀ ಸವಾಲುಃ ಅರ್ಜಿದಾರ ಪರ ವಕೀಲರಿಂದಃ-

ಅರ್ಜಿದಾರರಿಗೆ ನಾನು ಮೃತ ಮೀನಾರವರ ಶವಸಂಸ್ಕಾರಕ್ಕೆ 50 ಸಾವಿರ ನೀಡಿರುತ್ತೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ 3 ನೇ ಎದುರುದಾರ ಪರ ವಕೀಲರಿಂದಃ-</u>

ನನಗೆ ಒಟ್ಟು 4 ಜನ ಮಕ್ಕಳಿದ್ದು ಅವರ ಪೈಕಿ ಇಬ್ಬರು ಹೆಣ್ಣು ಮಕ್ಕಳು ಇದ್ದು ಇಬ್ಬರು ಗಂಡು ಮಕ್ಕಳು ಇರುತ್ತಾರೆ. ಹೆಣ್ಣು ಮಕ್ಕಳಿಗೆ ಮದುವೆ ಮಾಡಿಕೊಟ್ಟಿದ್ದು ಅವರ ಗಂಡನ ಮನೆಯಲ್ಲಿ ವಾಸವಿರುತ್ತಾರೆ ಎಂದರೆ ಸರಿ. ಗಂಡು ಮಕ್ಕಳ ಪೈಕಿ ಹಿರಿಯವನ ಹೆಸರು ಜಯರಾಮ್ ಹಾಗೂ ಕಿರಿಯವನ ಹೆಸರು ರವೀಶ್ ಎಂದು ಇರುತ್ತದೆ. ನಮ್ಮ ಮನೆಯ ಆಸ್ತಿಗಳನ್ನು ನಮ್ಮ ಮಕ್ಕಳಿಗೆ ವಿಭಾಗ ಮಾಡಿಕೊಟ್ಟಿರುತ್ತೇವೆ ಎಂದರೆ ಸರಿ. ಅದರಂತೆ ನನ್ನ ಇಬ್ಬರು ಗಂಡು ಮಕ್ಕಳು ಅವರವರ ಜಮೀನನ್ನು ಅವರೇ ವ್ಯವಸಾಯ ಮಾಡುತ್ತಿದ್ದಾರೆ ಎಂದರೆ ಸರಿ. ಸದರಿ ಜಮೀನಿನ ಖಾತೆ ಅವರವರ ಹೆಸರಿನಲ್ಲಿ ಇರುತ್ತದೆ ಎಂದರೆ ಸರಿ. ಸದರಿ ಜಮೀನುಗಳು ಕಾಫಿ ತೋಟ ಇರುತ್ತದೆ ಎಂದರೆ ಸರಿ.

ನನ್ನ ಮಗನಾದ 1 ನೇ ಎದುರುದಾರನಿಗೆ ಹಾಗೂ ಇನ್ನೊಬ್ಬ ಮಗನಿಗೆ ಎಷ್ಟೆಷ್ಟು ಜಮೀನು ಇರುತ್ತದೆ ಎಂದು ನನಗೆ ಹೇಳಲು ಆಗುವುದಿಲ್ಲ. 1 ನೇ ಎದುರುದಾರನೇ ಆತನ ಜಮೀನಿನ ಬೆಳಗಳ ಉಸ್ತುವಾರಿಯನ್ನು ನೋಡಿಕೊಳ್ಳುತ್ತಾನೆ ಎಂದರೆ ಸರಿ. ಇನ್ನೊಬ್ಬ ಮಗನು ಆತನ ಜಮೀನಿನ ಬೆಳಗಳ ಉಸ್ತುವಾರಿಯನ್ನು ನೋಡಿಕೊಳ್ಳುತ್ತಾನೆ ಎಂದರೆ ಸರಿ. ನನ್ನ ಇಬ್ಬರ ಗಂಡು ಮಕ್ಕಳ ಆಸ್ತಿಯು ಒಂದೇ ಕಡೆ ಇರುತ್ತದೆ. 1 ನೇ ಎದುರುದಾರನ ಜಮೀನಿನ ಸರ್ವೆ ನಂಬರ್ 482 ಎಂದು ಇರುತ್ತದೆ. ನನ್ನ ಇನ್ನೊಬ್ಬ ಮಗ ಜಯರಾಮ್ ನ ಜಮೀನಿನ ಸರ್ವೆ ನಂಬರ್ ನನಗೆ ಗೊತ್ತಿಲ್ಲ.

1 ನೇ ಎದುರುದಾರನ ತೋಟಕ್ಕೆ ಕೆಲಸಕ್ಕೆ ಬರುವ ಕೆಲಸಗಾರರಿಗೆ ಆತನೇ ಸಂಬಳವನ್ನು ನೀಡುತ್ತಾನೆ ಎಂದರೆ ಸರಿ. ಮೃತ ಮೀನಾ 1 ನೇ

ಎದುರುದಾರರ ತೋಟಕ್ಕೆ ಕೆಲಸಕ್ಕೆ ಹೋಗುತ್ತಿದ್ದರು ಎಂದರೆ ಸರಿ. ಘಟನಾ ದಿನ ಮೀನಾ 1 ನೇ ಎದುರುದಾರನ ತೋಟಕ್ಕೆ ಕೆಲಸಕ್ಕೆ ಬರುವ ಸಮಯದಲ್ಲಿ ಸದರಿ ಘಟನೆ ನಡೆದಿರುತ್ತದೆ ಎಂದರೆ ಸರಿ. ಸಾಮಾನ್ಯವಾಗಿ ನಮ್ಮ ತೋಟಕ್ಕೆ ಬೆಳಗ್ಗೆ:07.00 ಗಂಟೆಗೆ ಕೆಲಸಕ್ಕೆ ಕೆಲಸಗಾರರು ಬರುತ್ತಾರೆ. ನಮ್ಮ ಊರಿನಲ್ಲಿ ಬೆಳಗ್ಗೆ:07.00 ಗಂಟೆಗೆ ಯಾರೂ ಕೆಲಸಗಾರರು ಬರುವುದಿಲ್ಲ ಎಂದರೆ ಸರಿಯಲ್ಲ.

ಸದರಿ ಘಟನೆಯ ನಂತರ ಮೀನಾರವರನ್ನು 1 ನೇ ಎದುರುದಾರರೇ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ ಎಂದರೆ ಸರಿ. ಸದರಿ ಮೀನಾರವರ ಸಂಬಂಧಿಕರಿಗೆ 1 ನೇ ಎದುರುದಾರರು ಪರಿಹಾರವನ್ನು ನೀಡಿರುತ್ತಾರೆ ಎಂದರೆ ಸರಿ. ನನಗೂ ಹಾಗೂ ಸದರಿ ಮೀನಾರವರಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರ ಸುಳ್ಳಿನಿಂದ ಕೂಡಿರುತ್ತದೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆ: ಇಲ್ಲಾ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)
ಓ:ಹೇ:ಕೇ:ಪ:ಇ:ಎ:ಒ:

ಸಹಿ/-
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು ಸಿ.ಜೆ.ಎಂ,ಚಿಕ್ಕಮಗಳೂರು.

ಎಸ್‌ಆರ್: